ಉದ್ಯಮಿಯಾಗುವ ಕನಸನ್ನು ನನಸಾಗಿಸಿಕೊಂಡ

ಎಂ.ವಿನಯ್‌ಕುಮಾರ್

ಸಮಾಜಸೇವೆಯನ್ನು ಗುರಿಯಾಗಿಸಿಕೊಂಡು, ಕ್ರಿಯಾಶೀಲ ಬೆಳವಣಿಗೆಯೊಂದಿಗೆ, ಯುವ ಉದ್ಯಮಿಯಾಗಿ ಬೆಳವಣಿಗೆ ಸಾಧಿಸುತ್ತಿರುವವರು ಎಂ.ವಿನಯ್‌ಕುಮಾರ್. ಮೂವತ್ತಾರು ವರ್ಷದ ವಿನಯ್‌ಕುಮಾರ್ ಹುಟ್ಟಿದ್ದು ಮಂಡ್ಯದಲ್ಲಿ. ತಂದೆ ಮಂಜುನಾಥ್. ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವ್ಯವಸ್ಥಾಪಕರು. ತಾಯಿ ರಾಜೇಶ್ವರಿ ಸಮಾಜಮುಖಿ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಎಂ.ವಿನಯ್‌ಕುಮಾರ್ ಓದಿದ್ದು ಮೆಕ್ಯಾನಿಕಲ್ ಇಂಜಿನಿಯರ್. 2013ರಲ್ಲಿ ಪದವಿ ಗಳಿಸಿದ ಇವರು ಮೈಷುಗರ್ ಕರ್ಖಾನೆಯಲ್ಲಿ ಟ್ರೈನಿ ಆಗಿ ಆರು ತಿಂಗಳು ಕೆಲಸ ನಿರ್ವಹಿಸಿದರು. ಚಿಕ್ಕವಯಸ್ಸಿನಿಂದಲೂ ಉದ್ಯಮಿಯಾಗುವ ಕನಸು ಹೊತ್ತವರು. ತಾವು ಕಟ್ಟಿದ್ದ ಕನಸನ್ನು ನನಸಾಗಿಸಿಕೊಳ್ಳಲು ಆರಂಭದಲ್ಲಿ ಬೆಂಗಳೂರು ಡೋರ್ ಪ್ಲಾಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದರು. ಆ ಮೂಲಕ ಭಾರತದಲ್ಲಿ ಮೊದಲ ಬಾರಿಗೆ ಗಿಡಗಳನ್ನು ಆನ್ ಲೈನ್‌ನಲ್ಲಿ ಆರ್ಡರ್ ಮಾಡಿ ತೆಗೆದುಕೊಳ್ಳುವ ಸಂಸ್ಥೆಯನ್ನು ಹುಟ್ಟುಹಾಕಿದರು. ಮಾಜಿ ಸಚಿವ ಜನಾರ್ದನ ರೆಡ್ಡಿ ಮಗಳ ವಿವಾಹಕ್ಕೆ ಇವರ ಸಂಸ್ಥೆಯಿಂದ 50ಸಾವಿರ ಶ್ರೀಗಂಧ, ತುಳಸಿ ಗಿಡಗಳನ್ನು ನೀಡಲಾಗಿತ್ತು.

2018ರಲ್ಲಿ ಮಂಡ್ಯದಲ್ಲಿ ಪ್ರತಿಷ್ಠಿತ ಹೀರೋ ಎಲೆಕ್ಟ್ರಿಕ್ ಕಂಪನಿಯ ಎಲೆಕ್ಟ್ರಿಕ್ ಸ್ಕೂಟರ್‌ಗಳು ಮಾರುಕಟ್ಟೆಗೆ ಬಿಡುಗಡೆಯಾದವು. ವಿನಯ್ ಕುಮಾರ್ ಆ ಕಂಪನಿಯ ಡೀಲರ್‌ಶಿಪ್ ಪಡೆದು ಕೊಂಡು ಇ-ಮಾಂಡವ್ಯ ಮೋಟಾರ್ಸ್ ಎಲೆಕ್ಟ್ರಿಕಲ್ ವೆಹಿಕಲ್ ಶೋರೂಂ ಮತ್ತು ಸರ್ವೀಸ್ ಸೆಂಟರ್‌ನ್ನು ಮಂಡ್ಯದಲ್ಲಿ ತೆರೆದರು. ಇದರೊಂದಿಗೆ ತಾವು ಉದ್ಯಮಿಯಾಗುವ ಕನಸನ್ನು ನನಸು ಮಾಡಿಕೊಂಡರು.

ಒಬ್ಬ ಉದ್ಯಮಿಯಾಗಿ ತಾನು ಗಳಿಸಿದ ಲಾಭವನ್ನು ಜನರಿಗೆ ಕೊಡಬೇಕೆಂಬ ಆಸೆಯನ್ನು ಹೊತ್ತವರು ವಿನಯ್‌ಕುಮಾರ್. ಪ್ರಾಮಾಣಿಕವಾಗಿ ಎಲೆಕ್ಟ್ರಿಕ್ ವೆಹಿಕಲ್ ಉದ್ಯಮ ನಡೆಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಷೋ ರೂಂ ತೆರೆದರು.

ಎಲೆಕ್ಟ್ರಿಕ್ ಸ್ಕೂಟರ್‌ಗಳ ಬಗ್ಗೆ ಆಗಿನ್ನೂ ಜನರಿಗೆ ಹೆಚ್ಚು ತಿಳಿದಿರಲಿಲ್ಲ. ಹಾಗಾಗಿ ಹಳ್ಳಿ ಹಳ್ಳಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಿ ಉದ್ಯಮ ವನ್ನು ಯಶಸ್ವಿಯಾಗಿ ಮುನ್ನಡೆಸಿದರು. ಮೂರು ವರ್ಷದಲ್ಲಿ ಮೂರು ಸಾವಿರಕ್ಕೂ ಹೆಚ್ಚು ವಾಹನಗಳನ್ನು ಮಾರಾಟ ಮಾಡಿ ಯಶಸ್ವಿ ಉದ್ಯಮಿ ಎನಿಸಿದರು. ಇವರ ಕಾರ್ಯವ್ಯಾಪ್ತಿ ಮಂಡ್ಯಕ್ಕಷ್ಟೇ ಸೀಮಿತವಾಗಿರದೆ 2023ರಲ್ಲಿ ಮೈಸೂರಿನಲ್ಲಿ ಒಡೆಯರ್ ಎಲೆಕ್ಟ್ರಿಕ್ ವೆಹಿಕಲ್ ಮೋಟರ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಷೋರೂಂ ತೆರೆದರು. ನಂತರ ಪಾಂಡವಪುರಕ್ಕೂ ವಿಸ್ತರಣೆ ಮಾಡಿದರು.

ಎಲೆಕ್ಟ್ರಿಕ್ ವೆಹಿಕಲ್‌ಗೆ ಮುಖ್ಯವಾಗಿ ಮೋಟಾರ್, ಕಂಟ್ರೋಲರ್, ಕನ್ವರ್ಟರ್, ಚಾರ್ಜರ್ ಇನ್ನಿತರ ಸಾಮಗ್ರಿಗಳು ಅವಶ್ಯವಾಗಿ ಬೇಕಿವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಮಂಡ್ಯದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕಂಟ್ರೋಲರ್ ಕಾಂಪೋನೆಂಟ್ ತಯಾರಿಸುವ ಕಂಪನಿಯೊಂದನ್ನು ಆರಂಭಿಸುವ ಉದ್ದೇಶವನ್ನು ವಿನಯ್‌ಕುಮಾರ್ ಹೊಂದಿದ್ದಾರೆ.

ಪಪಾಸ್ಕಂದ ಪ್ರೈವೇಟ್ ಲಿಮಿಟೆಡ್‌ನಡಿ ಇಸ್ತ್ರೀ ಡಾಟ್ ಕಾಮ್ ಇನ್ನಿತರ ಕಾರ್ಯಚಟುವಟಿಕೆಗಳನ್ನು ಆರಂಭಿಸಿ ಕನಿಷ್ಠ 500 ಜನರಿಗೆ ಕೆಲಸ ಕೊಡುವ ನಿಟ್ಟಿನಲ್ಲಿ ಒಂದಷ್ಟು ಯೋಜನೆಗಳನ್ನು ರೂಪಿಸಿಟ್ಟುಕೊಂಡಿದ್ದಾರೆ.

ಉದ್ಯಮ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಪತ್ನಿ ಕೂಡ ಬೆಂಬಲವಾಗಿ ನಿಂತಿದ್ದಾರೆ. ಕುಟುಂಬ ನಿರ್ವಹಣೆಯ ಜೊತೆಯಲ್ಲೇ ಪತಿಗೆ ಎಲ್ಲ ರೀತಿಯಲ್ಲೂ ಸಹಕಾರಿಯಾಗಿ ಅವರ ಕನಸುಗಳ ಸಾಕಾರಕ್ಕೆ ಹೆಗಲುಕೊಟ್ಟಿದ್ದಾರೆ. ಯಶಸ್ವಿ ಪುರುಷನ ಬೆನ್ನಹಿಂದೆ ಒಬ್ಬ ಹೆಣ್ಣು ಇರುತ್ತಾಳೆಂಬುದನ್ನು ಸಾಬೀತು ಪಡಿಸಿದ್ದಾರೆ. ವಿನಯ್‌ಕುಮಾರ್ ತಂದೆ-ತಾಯಿ, ಪತ್ನಿ, ಹಾಗೂ ಇಬ್ಬರು ಪುತ್ರಿಯರೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ.

ಉದ್ಯಮ ಮತ್ತು ಸಮಾಜ ಎರಡೂ ವಿಷಯಗಳನ್ನು ಸಮಚಿತ್ತ ಭಾವದಿಂದ ತೆಗೆದುಕೊಂಡು ಹೋಗುವ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನಿಡುತ್ತಿರುವವರು ಎಂ.ವಿನಯ್‌ಕುಮಾರ್ ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ.

ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸ್ಥಾಪಿಸಿ ಸಮಾಜಸೇವೆ

ವಿನಯ್‌ಕುಮಾರ್ ಉದ್ಯಮಿಯಾಗ ಬೇಕೆಂಬ ಕನಸನ್ನು ಸಾಕಾರಗೊಳಿಸಿ ಕೊಳ್ಳುವುದರ ಜೊತೆಗೆ ಸಮಾಜಮುಖಿಯಾಗಿ ಒಂದಷ್ಟು ಸೇವೆ ಮಾಡಬೇಕೆಂಬ ಹಂಬಲವನ್ನೂ ಹೊತ್ತಿದ್ದಾರೆ. ಮಂಡ್ಯ ರೈತರು, ಯುವಕರು, ಅಶಕ್ತರ ಪರವಾಗಿ ಕೆಲಸ ಮಾಡಬೇಕೆಂಬ ಸದುದ್ದೇಶದೊಂದಿಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಆರಂಭಿಸಿದರು.

ಕಳೆದ ಆರೇಳು ವರ್ಷಗಳಿಂದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದುವರೆಗೆ ಕಾರ್ಯಕ್ರಮಕ್ಕೆ ಯಾರಿಂದಲೂ ಹಣ ಪಡೆದ ಉದಾಹರಣೆಯೇ ಇಲ್ಲ. ತಮ್ಮ ಶಕ್ತಾನುಸಾರ ಕಾರ್ಯಕ್ರಮಗಳನ್ನು ನಡೆಸಿ ಕೊಂಡು ಬರುತ್ತಾ ಎಲ್ಲರ ಪ್ರೀತಿ, ವಿಶ್ವಾಸ, ಮೆಚ್ಚುಗೆ ಗಳಿಸಿದ್ದಾರೆ. ಸಾಹಿತ್ಯ, ಕ್ರೀಡೆ, ಸೇವಾ ಕ್ಷೇತ್ರ, ನಾಟಕ, ಸಂಗೀತ, ಕಲೆ, ಆರೋಗ್ಯ, ಎಲ್ಲರೂ ಒಂದು ಎಂಬ ಭಾವನೆ ಮೂಡಿಸುವುದು ಟ್ರಸ್ಟ್‌ನ ಮುಖ್ಯ ಧ್ಯೇಯವಾಗಿದೆ. ಇದಕ್ಕೆ ಸಂಘ-ಸಂಸ್ಥೆಗಳೂ ಪಕ್ಷಾತೀತವಾಗಿ ಇವರಿಗೆ ಬೆಂಬಲ ಸೂಚಿಸುತ್ತಿವೆ.

ಮಂಡ್ಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ಮಗಳ ಜನ್ಮದಿನದಂದು ತಂದೆಯೇ ಬರೆದ ಪುಸ್ತಕವನ್ನು ಮಗಳಿಗೆ ಅರ್ಪಿಸಿ ಯಾವುದೇ ಅಬ್ಬರವಿಲ್ಲದೆ ಹುಟ್ಟುಹಬ್ಬ ಆಚರಿಸಿ ಕೊಂಡರು. ಸಂಸ್ಕೃತಿಗೆ ಅನುಗುಣವಾಗಿ ಸತ್ಯಾವತಾರ ಕಾರ್ಯಕ್ರಮ ಆಯೋಜಿಸಿ ಮಂಡ್ಯ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ವಿದ್ಯಾರ್ಥಿ ಹತ್ಯೆ: ಉದ್ವಿಗ್ನ ಪರಿಸ್ಥಿತಿ

ಸ್ಥಳೀಯರಿಂದ ರಸ್ತೆ ತಡೆದು ಪ್ರತಿಭಟನೆ; ಭಾರೀ ಮೆರವಣಿಗೆಯಲ್ಲಿ ಸಾಗಿ ಅಂತ್ಯ ಸಂಸ್ಕಾರ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ನಡೆದ ಗಲಾಟೆಯಲ್ಲಿ ಕೊಲೆಗೀಡಾದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಸಂಕೇತ್‌ನ ಅಂತ್ಯ ಸಂಸ್ಕಾರವನ್ನು ಪೊಲೀಸರ ಬಿಗಿ ಬಂದೋಬಸ್ತ್ ನಡುವೆ ಮಂಗಳವಾರ ಊರುಗಡೂರಿನ ಸಮೀಪದ ಗುಡ್ಡೆಮರಡಿಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಸ್ಥಳೀಯರು ಮತ್ತು ಹಿಂದೂಪರ ಸಂಘಟನೆಗಳ ತೀವ್ರ ಆಕ್ರೋಶದಿಂದಾಗಿ ಈ ಭಾಗದಲ್ಲಿ ಪರಿಸ್ಥಿತಿ ಗಂಭೀರವಾಗಿಯೇ ಇದೆ.

ಪೊಲೀಸರು ತೀವ್ರ ಬಂದೋಬಸ್ತ್ ಮಾಡಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದರು. ಹಿರಿಯ ಪೊಲೀಸರು ಅಧಿಕಾರಿಗಳು ಸ್ಥಳದಲ್ಲಿಯೇ ಬೀಡು ಬಿಟ್ಟಿದ್ದಾರೆ.

ಇಂದಿನಿಂದ ನಗರದಲ್ಲಿ ಶ್ರೀ ಮಾರಿಕಾಂಬಾ ಜಾತ್ರೆ ಆರಂಭಗೊಂಡಿದ್ದು, ಸಾವಿರಾರು ಜನ ಭಕ್ತರು ಸುತ್ತಮುತ್ತಲಿನ ಪ್ರದೇಶಗಳಿಂದ ನಗರಕ್ಕೆ ಆಗಮಿಸಿದ್ದು, ಈ ಹಿನ್ನೆಲೆಯಲ್ಲಿ ಪೊಲೀಸರು ಇನ್ನಷ್ಟು ಬಿಗಿಯಯಾದ ಕ್ರಮಕ್ಕೆ ಮುಂದಾಗಿದ್ದಾರೆ.

ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು ಮತ್ತು ಹಿಂದೂಪರ ಕಾರ್ಯಕರ್ತರು ಕೆಲ ಹೊತ್ತು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಕೆ.ಎಸ್. ಈಶ್ವರಪ್ಪ, ಶಾಸಕ ಚನ್ನಬಸಪ್ಪ ಮತ್ತಿತರ ಬಿಜೆಪಿ ನಾಯಕರು ಕೂಡ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನೆಯಲ್ಲಿ ಭಾಗಿಯಾದರು.

ಈ ನಾಯಕರು ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಗಾಂಜಾ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಪಡಿಸಿದ್ದಾರೆ.

ಘಟನೆ ವಿವರ: ಎಸ್ಸೆಸ್ಸೆಲ್ಸಿ ಪರೀಕ್ಷೆ ಹಿನ್ನೆಲೆಯಲ್ಲಿ ಊರಗಡೂರಿನ ಶಾಲೆಯಲ್ಲಿ ವಿಶೇಷ ತರಗತಿಗಳು ನಡೆಯುತ್ತಿದ್ದು, ಅದರಂತೆ ಸಂಕೇತ್ ಫೆ.23 ರಂದು ಸಂಜೆ ತರಗತಿ ಮುಗಿಸಿಕೊಂಡು ಮನೆಗೆ ಹಿಂದಿರುಗುತ್ತಿದ್ದ. ಈ ವೇಳೆ ಕ್ಷುಲ್ಲಕ ಕಾರಣಕ್ಕೆ ಸಹಪಾಠಿಗಳ ನಡುವೆ ಗಲಾಟೆಯಾಗಿದೆ. ಗಲಾಟೆ ಬಿಡಿಸಲು ಹೋದ ಸಂಕೇತ್ ಮೇಲೆ ಹಲ್ಲೆ ನಡೆಸಲಾಗಿದೆ. ಹಲ್ಲೆಯಿಂದ ತೀವ್ರ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದ ಆತನನ್ನು, ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದ.

ಸಾವನ್ನಪ್ಪಿದ್ದ ಸಂಕೇತ್ ಶವದ ಮುಂದೆ ಕುಟುಂಬಸ್ಥರ ಆಕ್ರಂದನ.

ಸೋಮವಾರ ರಾತ್ರಿ ಆಸ್ಪತ್ರೆಯಿಂದ ಶವಾಗಾರಕ್ಕೆ ಮೃತ ಶರೀರವನ್ನು ಕಳುಹಿಸಿದ್ದು, ಮಂಗಳವಾರ ಬೆಳಗ್ಗೆ ಪೋಸ್ಟ್ ಮಾರ್ಟಂ ಬಳಿಕ ಮಧ್ಯಾಹ್ನ ಹೊತ್ತಿಗೆ ಪಾರ್ಥಿವ ಶರೀರವನ್ನು ಸ್ವಗ್ರಹಕ್ಕೆ ತರಲಾಯಿತು. ಮೃತ ಸಂಕೇತ್ ನಿವಾಸ ಬಳಿ ಭಾರೀ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕಾರ್ಯಪ್ಪ ನೇತೃತ್ವದಲ್ಲಿ ಬಿಗಿ ಭದ್ರತೆ ನಿರ್ಮಿಸಲಾಗಿತ್ತು. ಮೃತ ಬಾಲಕನ ನಿವಾಸದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

ಮೃತ ಸಂಕೇತ್ ಮನೆಯಲ್ಲಿ ಪೂಜೆ ಬಳಿಕ ಅಂತ್ಯ ಸಂಸ್ಕಾರಕ್ಕೆ ಮೆರವಣಿಗೆ ಮೂಲಕ ಗುಡ್ಡೆಮರಡಿ ಹಿಂದೂ ರುದ್ರಭೂಮಿಗೆ ಮೃತದೇಹವನ್ನು ಕುಟುಂಬಸ್ಥರು ಕೊಂಡೊಯ್ದರು. ಹಾಲುಮತ ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಮೆರವಣಿಗೆಯಲ್ಲಿ ಸ್ಥಳೀಯ ನಿವಾಸಿಗಳು, ಕುಟುಂಬಸ್ಥರು, ಸ್ಥಳೀಯ ಮುಸಲ್ಮಾನರು ಕೂಡ ಭಾಗಿಯಾಗಿದ್ದರು. ಮೃತ ಕುಟುಂಬಸ್ಥರ ದುಃಖದಲ್ಲಿ ಸ್ಥಳೀಯರು ಭಾಗಿಯಾದರು.

ಪ್ರತಿಭಟನೆ-ಪರಿಹಾರಕ್ಕೆ ಆಗ್ರಹ: ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ, ಶಾಸಕ ಎಸ್.ಎನ್. ಚನ್ನಬಸಪ್ಪ, ಮಾಜಿ ಸಂಸದ ಆಯನೂರು ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಈ ಘಟನೆ ಖಂಡಿಸಿ, ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿದರು. ಸ್ಥಳೀಯರು ಮತ್ತು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ, ಪರಿಹಾರಕ್ಕಾಗಿ ಒತ್ತಾಯಿಸಿದರು ಹಾಗೂ ಗಾಂಜಾ ದಂಧೆಯನ್ನು ನಿಲ್ಲಿಸಲು ಪೊಲೀಸರು ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಎಳೆ ವಯಸ್ಸಿನ ಹುಡುಗರು ಗಾಂಜಾ ದಂಧೆಗೆ ಬಲಿಯಾಗಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ರಕ್ಷಣಾಧಿಕಾರಿ ಆಗಮಿಸಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಆದರೂ ಹೋರಾಟಗಾರರೂ ಜಗ್ಗಲಿಲ್ಲ. ಪ್ರತಿಭಟನೆ ಮುಂದುವರೆಸುವ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡಿ ಸರ್ಕಾರದವತಿಯಿಂದ ಪರಿಹಾರ ಘೋಷಣೆ ಮಾಡಿದರು. ಘಟನೆ ನಡೆದ ಬಡಾವಣೆ ಸುತ್ತಮುತ್ತಲೂ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಅನೇಕ ರಾಜಕೀಯ ನಾಯಕರು ಸ್ಥಳಕ್ಕೆ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಜಿಲ್ಲಾಧಿಕಾರಿ ವಿರುದ್ಧ ಈಶ್ವರಪ್ಪ ಗರಂ: ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಸ್ಥಳದಲ್ಲಿಯೇ ಜಿಲ್ಲಾಧಿಕಾರಿಗೆ ಕರೆ ಮಾಡಿದರು. ಈ ವೇಳೆ ಕರೆ ಸ್ವೀಕರಿಸದ ಜಿಲ್ಲಾಧಿಕಾರಿಗಳ ವಿರುದ್ಧ ಈಶ್ವರಪ್ಪ ಗರಂ ಆದ ಘಟನೆ ನಡೆಯಿತು. ಹಲವು ಬಾರಿ ಫೋನ್ ಮಾಡಿದ್ದು ಫೋನ್ ರಿಸೀವ್ ಮಾಡದ ಹಿನ್ನೆಲೆಯಲ್ಲಿ ಸಿಟ್ಟಾದ ಈಶ್ವರಪ್ಪ, ಜನ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸುತ್ತಿದ್ದಾರೆ. ಅವರಿಗೆ ಸಾಂತ್ವನ ಹೇಳುವ ಬದಲು ವಿಡಿಯೋ ಕಾನ್ಫರೆನ್ಸ್ ಇಂಪಾರ್ಟೆಂಟ್ ಆಗಿದ್ಯಾ? ಎಂದು ಜಿಲ್ಲಾಧಿಕಾರಿ ಆಪ್ತ ಸಹಾಯಕನ ಜೊತೆ ಏರು ಧ್ವನಿಯಲ್ಲಿ ಮಾತನಾಡಿದರು.

ಅಂತಿಮ ದರ್ಶನಕ್ಕೆ ಬಂದ ಕ್ಲಾಸ್ ಮೇಟ್ಸ್: ಸಹಪಾಠಿಯನ್ನು ನೆನೆದು ಅಂತಿಮ ದರ್ಶನಕ್ಕೆ ಬಂದ ಸಹಪಾಠಿಗಳು ಸ್ನೇಹಿತನ ಮೃತ ಶರೀರ ನೋಡಿ ಕಣ್ಣೀರು ಹಾಕಿದರು. ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು-ಮಹಿಳೆಯರು ಭಾಗಿಯಾಗಿ ಅಂತಿಮ ದರ್ಶನ ಪಡೆದುಕೊಂಡರು.

ಮುಸ್ಲಿಂ ಮುಖಂಡರಿಂದ ಸಾಂತ್ವನ: ಮೃತ ಬಾಲಕನ ನಿವಾಸಕ್ಕೆ ಮುಸ್ಲಿಂ ಮುಖಂಡರು ಆಗಮಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಮೃತ ಬಾಲಕ ನಮ್ಮ ಮಗ ಇದ್ದಂತೆ, ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಯಾರೇ ತಪ್ಪು ಮಾಡಿದರೂ ತಪ್ಪು ತಪ್ಪೇ ಎಂದು ಮುಸ್ಲಿಂ ಮುಖಂಡರು ಹೇಳಿದರು.

ಏಳು ಮಂದಿ ವಶಕ್ಕೆ: ವರಿಷ್ಠಾಧಿಕಾರಿ ಬಿ. ನಿಖಿಲ್

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 7 ಮಂದಿ ಅಪ್ರಾಪ್ತ ಬಾಲಕರನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್ಪಿ ಬಿ. ನಿಖಿಲ್ ತಿಳಿಸಿದರು. ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಕೇವಲ ಕ್ರಿಕೆಟ್ ಆಟದ ವಿಚಾರವಾಗಿ ನಡೆದ ಕ್ಷುಲ್ಲಕ ಗಲಾಟೆಯು ಹತ್ಯೆಯಲ್ಲಿ ಅಂತ್ಯವಾಗಿರುವುದು ತನಿಖೆ ಯಿಂದ ತಿಳಿದುಬಂದಿದೆ ಎಂದು ಸ್ಪಷ್ಟಪಡಿಸಿದರು. ಮೃತ ಬಾಲಕನ ಜೊತೆ ಆರೋಪಿಗಳು ಕಳೆದ ಎರಡು ದಿನಗಳ ಹಿಂದೆಯೇ ಕ್ರಿಕೆಟ್ ಆಟದ ವಿಚಾರ ವಾಗಿ ಜಗಳವಾಡಿದ್ದರು. ಘಟನೆಯ ದಿನ ಬೇರೊಬ್ಬನ ಮೇಲೆ ಹಲ್ಲೆ ನಡೆ ಯುತ್ತಿದ್ದಾಗ ಜಗಳ ಬಿಡಿಸಲು ಹೋದ ಮೃತ ಬಾಲಕನ ಮೇಲೆ ಆರೋಪಿ ಗಳು ಕೈಯಿಂದ ತೀವ್ರವಾಗಿ ಗುದ್ದಿದ್ದಾರೆ. ಇದರಿಂದ ಗಂಭೀರ ಪೆಟ್ಟು ಬಿದ್ದು ಬಾಲಕ ಮೃತಪಟ್ಟಿದ್ದಾನೆ ಎಂದು ವಿವರಿಸಿದರು. ಪ್ರಕರಣವನ್ನು ಗಂಭೀರ ವಾಗಿ ಪರಿಗಣಿಸಿರುವ ಪೊಲೀಸ್ ಇಲಾಖೆ, ಕೃತ್ಯ ಎಸಗಿದ ಅಪ್ರಾಪ್ತ ಬಾಲ ಕರು ಗಾಂಜಾ ಸೇವನೆ ಮಾಡಿದ್ದಾರೆಯೇ ಎಂಬ ಬಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಲು ಮುಂದಾಗಿದ್ದೇವೆ. ಒಂದು ವೇಳೆ ಮಾದಕ ವಸ್ತುಗಳ ನಂಟು ಕಂಡುಬಂದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

ಸರ್ಕಾರದಿಂದ 15 ಲಕ್ಷ ರು. ಪರಿಹಾರ ಘೋಷಣೆ

ಅಪ್ರಾಪ್ತ ಬಾಲಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಮೃತನ ಕುಟುಂಬಕ್ಕೆ ಪರಿಹಾರ ಘೋಷಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೂರವಾಣಿ ಕರೆ ಮೂಲಕ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದ್ದು, ಒಟ್ಟು 15 ಲಕ್ಷ ರು. ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅವರು, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಸೂಚನೆ ಮೇರೆಗೆ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಘೋಷಿತ ಪರಿಹಾರದಲ್ಲಿ 10 ಲಕ್ಷ ರು. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಾಗೂ ಉಳಿದ 5 ಲಕ್ಷ ರು. ಶಿಕ್ಷಣ ಇಲಾಖೆ ವತಿಯಿಂದ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಹತ್ಯೆ ನಡೆದ ಬಡಾವಣೆ ಸೇರಿ ನಗರದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ಮುಂಬರುವ ಜಾತ್ರೆ, ಹಬ್ಬಗಳ ಹಿನ್ನೆಲೆ ಯಾ ವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಆರೋಪಿಗಳ ಗಲ್ಲಿಗೇರಿಸಿ: ಸಹೋದರಿ

ಸಹೋದರಿ ಸುಪ್ರೀತಾ ಮಾತನಾಡಿ, ರಾತ್ರಿ 8.30ಕ್ಕೆ ವಿಶೇಷ ತರಗತಿ ಮುಗಿಯುತ್ತಿತ್ತು. ಸೋಮವಾರ 9 ಗಂಟೆಯವರೆಗೂ ಪಾಠ ಮಾಡಿದ್ದಾರೆ. ಆದರೆ ನಮಗೆ ವಿಷಯ ತಿಳಿಸಲಿಲ್ಲ. ಮೆಸೇಜ್ ಮಾಡಿದರೆ ತಮ್ಮನನ್ನು ಕರೆದುಕೊಂಡು ಬರಲು ನಾನೇ ಹೋಗುತ್ತಿದ್ದೆ. ನನ್ನ ತಮ್ಮನನ್ನು ಹತ್ಯೆ ಮಾಡಿದವರನ್ನು ಗಲ್ಲಿಗೇರಿಸಬೇಕು. ಇಲ್ಲದಿದ್ದರೆ ನಮ್ಮ ಕುಟುಂಬದವರು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಅಕ್ಕ ಸುಪ್ರೀತಾ ಆಕ್ರೋಶ ಹೊರಹಾಕಿದರು. ಶಾಲೆಗೆ ಹೋಗಿದ್ದ ಮಗ ಬರಲಿಲ್ಲ. ಇನ್ನೇನು ಮನೆಗೆ ಬರ್ತಾನೆ ಅಂತ ಕಾದಿದ್ದೆ. ಅಷ್ಟರಲ್ಲಿ ಕೊಲೆಯಾಗಿ ಹೋಗಿದ್ದಾನೆ. ಎಸ್ಸೆಸ್ಸೆಲ್ಸಿಯಲ್ಲಿ ರ್‍ಯಾಂಕ್ ಪಡೆದು ಫ್ಲೆಕ್ಸ್ ಹಾಕಿಸಿಕೊಳ್ಳುತ್ತೇನೆ ಎನ್ನುತ್ತಿದ್ದವನು ಈ ರೀತಿ ಕೊಲೆಯಾಗಿದ್ದಾನೆ ಎಂದು ತಾಯಿ ಮಂಜುಳ ಗೋಳಾಡಿದರು. ನನ್ನ ಮೊಮ್ಮಗ ಎಸ್ಸೆಸ್ಸೆಲ್ಸಿ ಪಾಸಾದರೆ ಬೈಕ್ ಕೊಡಿಸುತ್ತೇನೆ ಎಂದು ಹೇಳಿದ್ದೆ. ಈಗ ಬೈಕ್ ಯಾರಿಗೆ ಕೊಡಿಸಲಿ ಎಂದು ಅಜ್ಜಿ ಲಕ್ಷ್ಮಮ್ಮ ಕಣ್ಣೀರಿಟ್ಟರು.

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/03/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :
ಶಿವಮೊಗ್ಗ , ತರೀಕೆರೆ, 0123570730014108, ಥರನಮ್, 44983/-, ಚೈನ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ-1:ಟೆಂಡರ್-63:2025-26 ದಿನಾಂಕ: 24.02.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಲೆಕ್ಕ ಶೀರ್ಷಿಕೆ ಸಿ.ಇ.ಪಿ.ಎಂ.ಐ.ಜಡ್. (ಕೆ.ಎಂ.ಇ.ಆರ್.ಸಿ) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- 1 ಪ್ಯಾಕೇಜ್-01 ಎ) ಚಿತ್ರದುರ್ಗ ತಾಲ್ಲೂಕು ಸಾಸಲು-ಚಿತ್ರದುರ್ಗ ರಾಜ್ಯ ಹೆದ್ದಾರಿ-48 ಮಾರ್ಗ ಬಿ.ದುರ್ಗ, ಭೀಮಸಮುದ್ರ, ಹಿರೇಕಂದವಾಡಿ, ಮಾಳಪ್ಪನಹಟ್ಟಿ ರಸ್ತೆ ಅಭಿವೃದ್ಧಿ ಬಿ) ಚಿತ್ರದುರ್ಗ ತಾಲ್ಲೂಕು ಸಿರಿಗೆರೆ ಯಿಂದ ಬೊಮ್ಮೇನಹಳ್ಳಿ ಮಾರ್ಗ ಕಡ್ಲೆಗುದ್ದು ರಸ್ತೆ ಅಭಿವೃದ್ಧಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ.

ಇ.ಎಂ.ಡಿ.:- ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು ಟೆಂಡರ್ ವಿವರಗಳು ಈ ಕೆಳಕಂಡಂತಿವೆ.

(1) ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 24.02.2026 ರಿಂದ 03.03.2026 ರ 16.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಫ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: 27.02.2026 ರ ಪೂರ್ವಾಹ್ನ 11.30 ಗಂಟೆಗೆ ಲೋಕೋಪಯೋಗಿ ಇಲಾಖೆ, ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.03.2026 ರ ಅಪರಾಹ್ನ 16.30 ಗಂಟೆಯವರೆಗೆ (4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2026 ರ ಅಪರಾಹ್ನ 16.45 ಗಂಟೆಗೆ (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (6) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ 91 9240214000 & 91 9240214001. ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/ 700/2025-26

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)
CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್ : +91 44 4564 4022

IDFC FIRST Bank

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	115544827 & 69570731	ಆಸ್ತಿ ಮೇಲಿನ ಸಾಲ	1. ಪ್ರದೀಪ್ ಕುಮಾರ್ ಎಚ್ 2. ಪಂಕಜ ಎಚ್	27.01.2026	ಐಎನ್‌ಆರ್ 9,00,718.22/-

ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಇ-ಸ್ವತ್ತು ಸಂ. 152400301200200080, ಆಸ್ತಿ ಸಂ. 62, ವಿಸ್ತೀರ್ಣ 12.192 ಮೀ.ಗಳು X 9.144 ಮೀ = 111.48 ಚದರ ಮೀ.ಗಳು ನಿವೇಶನ, ಜೊತೆಗೆ 92.90 ಚ.ಮೀ.ಗಳ ವಸತಿ ಮನೆ, ಗುತ್ತನಹಳ್ಳಿ ಗ್ರಾಮ, ಬರೂರು ಗ್ರಾಮ ಪಂಚಾಯತ್, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಕರ್ನಾಟಕ -577431, ಮತ್ತು ಇದರ ಚಕ್ಕುಬಂದಿ: ಉತ್ತರಕ್ಕೆ: ಖಾಲಿ ಭೂಮಿ ಸರ್ವೆ ಸಂ.1ಕ್ಕೆ ಸೇರಿದೆ, ದಕ್ಷಿಣಕ್ಕೆ : ಖಾಲಿ ಭೂಮಿ ಸರ್ವೆ ಸಂ.1ಕ್ಕೆ ಸೇರಿದೆ, ಮತ್ತು ಜಿ.ಪಿ. ರಸ್ತೆ, ಪೂರ್ವಕ್ಕೆ : ಖಾಲಿ ಭೂಮಿ ಸರ್ವೆ ಸಂ.1ಕ್ಕೆ ಸೇರಿದೆ, ಪಶ್ಚಿಮಕ್ಕೆ: ಖಾಲಿ ಭೂಮಿ ಸರ್ವೆ ಸಂ.1ಕ್ಕೆ ಸೇರಿದೆ.

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 25.02.2026
ಸ್ಥಳ: ಶಿವಮೊಗ್ಗ, ಕರ್ನಾಟಕ

CHANGE OF NAME

I, **JAYANTH KUMAR K D** S/O Devendra K.C, Residing at, Sharadha Nilaya, 2nd Cross, 'B' Block, Gandhi Nagara, Shivamogga - 577201, Karnataka State India. Do here by declare that both the name i.e., **JAYANTHA KUMARA K D** and **JAYANTH KUMAR K D** are one and the same person refers to me only, now I have changed my name to **JAYANTH KUMAR K D** vide affidavit dated: 23/02/2026 sworn before Notary by Pramila T.H., Shivamogga.

ಕನ್ನಡಪ್ರಭ ಚಿತ್ರಪ್ರಭ

CAUTION
Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the Advertisers. The Printer, Publisher, Editor and Owner of Kannada Prabha Publications Ltd., shall not be held responsible/ liable for any consequences, in case such claims are found to be false. ಕನ್ನಡಪ್ರಭ

ಕೆನರಾ ಬ್ಯಾಂಕ್ Canara Bank

ಸಿಂಡಿಕೇಟ್ SyndicateBank
(A GOVERNMENT OF INDIA UNDERTAKING)

ಪ್ರಾದೇಶಿಕ ಕಛೇರಿ ಶಿವಮೊಗ್ಗ
ಮುಖ್ಯ ಕಛೇರಿ: ಬೆಂಗಳೂರು

ಚಿನ್ನಾಭರಣ ಇ-ಹರಾಜು ಪ್ರಕಟಣೆ

ಕೆಳಗೆ ತಿಳಿಸಿದ ವ್ಯಕ್ತಿಯು ನಮ್ಮ ಶಾಖೆಯಿಂದ ಚಿನ್ನದ ಸಾಲವನ್ನು ಪಡೆದಿದ್ದು, ಅವರು ಸಾಲದ ಖಾತೆಗಳಲ್ಲಿನ ಹೊಣೆಗಾರಿಕೆಯನ್ನು ಪಾವತಿಸಲು ವಿಫಲರಾಗಿದ್ದಾರೆ ಎಂದು ಈ ಮೂಲಕ ತಿಳಿಸಲಾಗಿದೆ. ನೋಂದಾಯಿತ ಅಂಚೆಯ ಮೂಲಕ ಅವರಿಗೆ ನೋಟಿಸ್‌ಗಳನ್ನು ಕಳುಹಿಸಲಾಗಿದೆ ಮತ್ತು ಈ ಮೂಲಕ ಹೊಣೆಗಾರಿಕೆ ಮತ್ತು ಇತರ ಶುಲ್ಕಗಳನ್ನು ಪಾವತಿಸಲು ಮತ್ತು **11-03-2026 ರಂದು** ಅಥವಾ ಅದಕ್ಕೂ ಮೊದಲು ಒತ್ತೆ ಇಟ್ಟಿರುವ ಚಿನ್ನದ ಆಭರಣ ಸೆಕ್ಯುರಿಟಿಗಳನ್ನು ಪಡೆದುಕೊಳ್ಳಲು ವಿನಂತಿಸಲಾಗಿದೆ, ವಿಫಲವಾದರೆ, **12-03-2026 ರಂದು** ಮದ್ಯಾಹ್ನ 3.00 ಗಂಟೆಗೆ ಬ್ಯಾಂಕಿಗೆ ಸೂಕ್ತವೆನಿಸಿದ ದಿನದಂದು ಮರು ನೋಟಿಸ್ ನೀಡದೆ ಬ್ಯಾಂಕಿನ ಅಧಿಕಾರ ಚಲಾಯಿಸಿ 'ಎಲ್ಲಿ ಹೇಗಿದೆಯೋ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಯಾವುದೇ ಅವಲಂಬನೆ ಇಲ್ಲದ ಹಾಗೆ' ಹರಾಜು ಹಾಕಲಾಗುವುದು. ಅಥವಾ ಯಾವುದೇ ಇತರ ಅನುಕೂಲಕರ ದಿನಾಂಕದಂದು ಯಾವುದೇ ಸೂಚನೆಯಿಲ್ಲದೆ, ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಿಂದ ಸಾಲಗಾರನ ವೆಚ್ಚದಲ್ಲಿ ಸಾರ್ವಜನಿಕ ಹರಾಜು ಮಾಡಲಾಗುವುದು. **ಪ್ರಮುಖ ಸೂಚನೆ:** ಹರಾಜಿಗೆ ಆಭರಣಗಳನ್ನು ಗುರುತಿಸುವುದು ಬ್ಯಾಂಕಿನ ಸ್ವಂತ ವಿವೇಚನೆಗೆ ಬಿಟ್ಟದ್ದು. ಹರಾಜು ಶುಲ್ಕಗಳು - ಹರಾಜಾದ/ಬಿಡ್‌ಗೆ ರೂ.470 + ಜಿಎಸ್‌ಟಿ ಮತ್ತು ಪತ್ರಿಕಾ ಪ್ರಕಟಣೆ ಶುಲ್ಕಗಳನ್ನು ನಿಮ್ಮ ಸಾಲದ ಖಾತೆಯಿಂದ ಪಡೆಯಲಾಗುತ್ತದೆ. ಮತ್ತು/ಅಥವಾ ಚಿನ್ನದ ಹರಾಜಿನ ಆದಾಯದಿಂದ ಮರುಪಡೆಯಲಾಗುತ್ತದೆ.

ಕ್ರ. ಸಂ	ಗ್ರಾಹಕರ ಐಡಿ / ಸಾಲದ ಖಾತೆ ಸಂಖ್ಯೆ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲದ ದಿನಾಂಕ	ಮಂಜೂರಾದ ಮೊತ್ತ	23-02-2026 ರಂತೆ ಇಒಪಿ ಬಾಕಿ ಮೊತ್ತ ರೂ.
ಶಿವಮೊಗ್ಗ ಎಸ್.ಎಂ. ಸರ್ಕಲ್ ಶಾಖೆ (524)					
1	64841733 / 164039626314	ಕೆ.ಎ. ಸುಬ್ರಮಣ್ಯ ಭಟ್ಟ ಬಿನ್ ಆನಂದಭಟ್ಟ ಕೆ.ಎಸ್ ಡಿ. ನಂ.212, ಹೊಳೆಹೊನ್ನೂರು ರಸ್ತೆ, ಹೊಳೆಬೆನವಳ್ಳಿ ಅಂಚೆ, ಶಿವಮೊಗ್ಗ ತಾಲ್ಲೂಕು, ಕರ್ನಾಟಕ-577222	22-10-2024	1,40,000.00	1,58,463.00
2	64841733 / 164039626472	ಕೆ.ಎ. ಸುಬ್ರಮಣ್ಯ ಭಟ್ಟ ಬಿನ್ ಆನಂದಭಟ್ಟ ಕೆ.ಎಸ್ ಡಿ. ನಂ.212, ಹೊಳೆಹೊನ್ನೂರು ರಸ್ತೆ, ಹೊಳೆಬೆನವಳ್ಳಿ ಅಂಚೆ, ಶಿವಮೊಗ್ಗ ತಾಲ್ಲೂಕು, ಕರ್ನಾಟಕ-577222	22-10-2024	1,14,000.00	1,26,185.88
ಮಂಡಗದ್ದೆ ಶಾಖೆ (576)					
3	92419478 / 164039449219	ರೇಣುಕ ಕೋಂ ಗೋಪಾಲ ಮೇಲಿನಕೊಪ್ಪ ಸಿಂಗನಬಿದರೆ ತೀರ್ಥಹಳ್ಳಿ ಶಿವಮೊಗ್ಗ ಕರ್ನಾಟಕ 577220	21-10-2024	12,000.00	14,451.00

ಹರಾಜು ವಿಧಾನ: ಆನ್‌ಲೈನ್; ವೆಬ್‌ಸೈಟ್: On-line; Website: M/s Antares Systems Ltd - http://www.gerpegov.com/canarabank

ಬಿಡ್‌ದಾರರು ಇಎಂಡಿ ಮೊತ್ತವನ್ನು 11/03/2026 ರಂದು ಪಾವತಿಸಬೇಕು. ಅಥವಾ ಮೊದಲು ಆಯಾ ಶಾಖೆಯಲ್ಲಿ ಪ್ರತಿ ಶಾಖೆಗೆ 25,000/- ಮತ್ತು ಹೊಸ ಬಿಡ್‌ದಾರರು ಹರಾಜು ಸೇವಾ ಪೂರೈಕೆದಾರರ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಸೇವಾ ಪೂರೈಕೆದಾರರ 080-45982100/ 033-46046611 ಅಥವಾ ಶಾಖಾ ವ್ಯವಸ್ಥಾಪಕರು: 8095819121ಗೆ ಸಂಪರ್ಕಿಸಬಹುದು

ಸ್ಥಳ: ಶಿವಮೊಗ್ಗ, ದಿನಾಂಕ: 25-02-2026
ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

Bank of Baroda ओल्ड टाउन् ಭದ್ರಾವತಿ ಶಾಖೆ,

ಓಲ್ಡ್ ಟೌನ್ ಭದ್ರಾವತಿ ಶಾಖೆ,
ತಾಲ್ಲೂಕ್ ಕಚೇರಿ ಎದುರು, ಭದ್ರಾವತಿ, ಶಿವಮೊಗ್ಗ ಜಿಲ್ಲೆ, ಕರ್ನಾಟಕ 577301. ಫೋನ್: 08282 266179 ಮೊ: 9966443021
ಇಮೇಲ್ : vjbhot@bankofbaroda.com
website: www.bankofbaroda.com

ಸ್ವಾಧೀನ ಸೂಚನೆ

ಆದಾಗ್ಯೂ, ಕೆಳಸಹಿದಾರರು **ಬ್ಯಾಂಕ್ ಆಫ್ ಬರೋಡ, ಬಿ.ಹೆಚ್.ರಸ್ತೆ ಭದ್ರಾವತಿ ಶಾಖೆ.** ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತಿಕರಣ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002ರಡಿ (ಸೆಕೆಂಡ್) ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇಧ 13(12) ಹಾಗೂ ನಿಯಮ 3ರ ಅನ್ವಯ ಪ್ರದತ್ತವಾದ ಅಧಿಕಾರಿಗಳಂತೆ **28-11-2025** ರ ಡಿಮಾಂಡ್ ನೋಟೀಸ್ ಜಾರಿ ಮಾಡಿ **ಸಾಲಗಾರರಾದ: ಮೇ॥ ಬಿದರೆ ಲಿಂಗಪ್ಪ ಟ್ರೇಡರ್ಸ್, ಪ್ರತಿನಿಧಿಸುತ್ತಿರುವ ಮಾಲೀಕರು: ಶ್ರೀ ಟಿ.ಎಂ.ನಾಗೇಶ್ ಮತ್ತು ಜಾಮೀನುದಾರರು: ಶ್ರೀಮತಿ ಧನಲಕ್ಷ್ಮೀ ಆರ್.ಎನ್., ಮತ್ತು ಶ್ರೀ ಗುರುಮೂರ್ತಿ ವಿ,** ಇವರ ನೋಟಿಸಿನಲ್ಲಿ ತಿಳಿಸಿರುವಂತೆ ಸಾಲದ ಬಾಬ್ತು **ರೂ. 12,68,743.56/- (ರೂಪಾಯಿ ಹನ್ನೆರಡು ಲಕ್ಷದ ಅರವತ್ತೆಂಟು ಸಾವಿರದ ಏಳುನೂರಾ ನಲವತ್ತೂರು ಮತ್ತು ಐವತ್ತಾರು ಪೈಸೆ ಮಾತ್ರ)** ಅದರ ಮೇಲಿನ ಹೆಚ್ಚಿನ ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ 60 ದಿನಗಳ ಒಳಗೆ ಸದರಿ ಸೂಚನೆಯ ಸ್ವೀಕೃತಿಯ ದಿನಾಂಕವನ್ನು ರೂಪಿಸತಕ್ಕದ್ದು.

ಸಾಲಗಾರರು ಬಾಕಿಯಾಗಿರುವ ಸಾಲವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಆದುದರಿಂದ ಸಾಲಗಾರರು/ಜಾಮೀನುದಾರರು ಅಡಮಾನದಾರರು ಮತ್ತು ಸಾರ್ವ ಜನಿಕರಿಗೆ ಸೂಚನೆ ನೀಡುವುದೇನೆಂದರೆ ಕೆಳಸಹಿದಾರರು ಅವನು/ಅವಳಿಗೆ ನಿಯಮ 9ರಜೊತೆಗೆ ಓದಿಕೊಳ್ಳಬೇಕಾದ ಸದರಿ 2002ರ ಕಾಯ್ದೆಯ ಸೆಕ್ಷನ 13(4) ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಇದೇ ವರ್ಷ **19-02-2026** ರಂದು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ ಎಂಬುದಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ತಿಳಿಯಪಡಿಸುತ್ತಾರೆ.

ಸಾಲಗಾರರು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ನೀಡುವ ಎಚ್ಚರಿಕೆಯೇನೆಂದರೆ ಸದರಿ ಆಸ್ತಿಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು ಹಾಗೂ ವ್ಯವಹರಿಸಿದ್ದೇ ಆದಲ್ಲಿ ಬ್ಯಾಂಕ್ ಆಫ್ ಬರೋಡಗೆ ಬಾಕಿಯಾಗಿರುವ ವಸೂಲಾಗಬೇಕಾದ ಸಾಲದ ಬಾಬ್ತು ಇದ್ದಂತೆ **ರೂ.12,83,788.28/- (ಹನ್ನೆರಡು ಲಕ್ಷದ ಎಂಭತ್ತೂರು ಸಾವಿರದ ಏಳುನುರಾ ಎಂಭತ್ತೆಂಟು ಮತ್ತು ಇಪ್ಪತ್ತೆಂಟು ಪೈಸೆ) 18-02-2026** ಮತ್ತು ಅದರ ಮೇಲಿನ ಬಡ್ಡಿ.

ಸರ್ಫೇಸಿ ಕಾಯಿದೆ ಕಲಂ 13(8)ರ ಕಟ್ಟಳೆಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲಾಗಿದೆ, ಇದರಲ್ಲಿ ಭದ್ರತೆಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯಾವಕಾಶದ ಬಗ್ಗೆ ತಿಳಿಸಲಾಗಿದೆ.

: ಸ್ಥಿರಾಸ್ತಿಯ ವಿವರಣೆ :

ಆಸ್ತಿ 01 : ಈ ಆಸ್ತಿಯ ಎಲ್ಲಾ ಭಾಗವು ಮತ್ತು ಖಾಲಿ ಮನೆಯ ಜಾಗದ ಅಳತೆ 1800 ಚದುರಡಿ, ಮುನ್ಸಿಪಲ್ ಖಾತಾ ನಂ.1439 - 27/5-23, 27/5-223, 27/4-220, 27/3-221, 27/2-222, 27/1 ಆಗಿದ್ದು, ವಾರ್ಡ್ ನಂ.09, ಕನಕಟ್ಟೆ ಬಡಾವಣೆ, ಸಿಎಂಸಿ ಭದ್ರಾವತಿ ನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ಈ ಆಸ್ತಿಯು ಟಿ.ಎಂ.ನಾಗೇಶ್ ಇವರ ಹೆಸರಿನಲ್ಲಿದೆ. ಚಕ್ಕುಬಂದಿ:- ಪೂರ್ವ: ಪಂಚಾಯತ್ ಆಸ್ತಿ. ಪಶ್ಚಿಮ: ರಸ್ತೆ. ಉತ್ತರ: ಖಾಸಗಿ ಆಸ್ತಿ. ದಕ್ಷಿಣ: ರಸ್ತೆ.

ಆಸ್ತಿ 02 : ಈ ಆಸ್ತಿಯ ಎಲ್ಲಾ ಭಾಗವು ಮತ್ತು ಖಾಲಿ ಮನೆಯ ಜಾಗದ ಅಳತೆ 600 ಚದುರಡಿ, ಮುನ್ಸಿಪಲ್ ಖಾತಾ ನಂ.1419/1905 ಆಗಿದ್ದು, ವಾರ್ಡ್ ನಂ.14, ಕಬಾಲಿಕಟ್ಟೆ ಅಶ್ವತ್‌ನಗರ ಬಡಾವಣೆ, ಸಿಎಂಸಿ ಭದ್ರಾವತಿ ನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ಈ ಆಸ್ತಿಯು ವಿ. ಗುರುಮೂರ್ತಿ ಇವರ ಹೆಸರಿನಲ್ಲಿದೆ. ಚಕ್ಕುಬಂದಿ:- ಪೂರ್ವ: ಸೈಟ್ ನಂ.64. ಪಶ್ಚಿಮ: ಸೈಟ್ ನಂ.62. ಉತ್ತರ: ಸೈಟ್ ನಂ.58. ದಕ್ಷಿಣ: ರಸ್ತೆ.

ದಿನಾಂಕ: 19-02-2026
ಸ್ಥಳ: ಭದ್ರಾವತಿ
ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ